
ISBN : 978-93-83813-43-8

ಕೆ.ಎಲ್.ಇ. ಸಂಸ್ಥೆಯ ಎಸ್.ಕೆ. ಕಲಾ ಮಹಾವಿದ್ಯಾಲಯ ಮತ್ತು
ಎಚ್. ಎಸ್. ಕೆ. ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

# ಸ್ವಾತಂತ್ರ್ಯ ಚಳುವಳಿ ಮತ್ತು ಕನ್ನಡ ಸಾಹಿತ್ಯ

## Swaatantrya Chaluvali & Kannada Saahitya..

(Papers Presented in International Seminar)



ಸಂಪಾದಕರು

ಡಾ. ವಿದ್ಯಾವತಿ ರಜಪೂತ
ಪ್ರೊ. ಬಿ. ಬಿ. ಡೆಂಗನವರ
ಡಾ. ಆರ್. ವಿ. ಪಾಟೀಲ
ಡಾ. ಎಸ್. ಟಿ. ಮೇರವಾಡೆ
ಡಾ. ಎಂ. ಎಸ್. ಮಾಗಣಗೇರಿ

Scanned with CamScanner

# ಪರಿವಿಡಿ


1. ಸ್ವಾತಂತ್ರ್ಯ ಚಳುವಳಿಗೆ ಮಹರ್ಷಿ ಅರವಿಂದರ ಕೊಡುಗೆ 1
   ● ಪ್ರೊ. ಬಿ. ಬಿ. ಡೆಂಗನವರ
2. ಬೇಂದ್ರೆಯ ಕಾವ್ಯಗಳಲ್ಲಿ ರಾಷ್ಟ್ರೀಯತೆ 7
   ● ಡಾ.ಅಶ್ವತ್ತಮ್ಮ. ಕೆ
3. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಾತ್ರ 9
   ● ತಬಸ್ಸುಮ ಬಿಜಾಪುರ
4. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 14
   ● ಡಾ. ಚೆಲುವರಾಜು
5. ಕುವೆಂಪು ಕಾವ್ಯಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆ 18
   ● ಮಲ್ಲಿಕಾರ್ಜುನಪ್ಪ ಎನ್.ಎಸ್
6. ನವೋದಯ . ಕವಿತೆಗಳಲ್ಲಿ ಸ್ವಾತಂತ್ರ್ಯ ಮತ್ತು ದೇಶ ಪ್ರೇಮ 23
   ● ಸಂಜಯಕುಮಾರ ಹಾರೋಬಿಡಿ
7. ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬುಡಕಟ್ಟು ಕೊಡುಗೆ 27
   ● ಡಾ. ಆನಂದಪ್ಪ ಬಿ. ಎಚ್. (ಜೋಗಿ)
8. ಸ್ವಾತಂತ್ರ ಸೇನಾನಿ ಶ್ರೀ ಚನ್ನಪ್ಪ ಯರಗಣವಿ 31
   ● ಕು. ಅನುಷಾ ಕಲ್ಲಪ್ಪ. ಪೂಜಾರ
9. ಸ್ವಾತಂತ್ರ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 34
   ● ಡಾ. ದಾಕ್ಷಾಯಣಮ್ಮ ಎಂ.
10. ಭಾರತ ಸ್ವಾತಂತ್ರ್ಯ ಚಳುವಳಿ : ಚಳುವಳಿಗೆ ದ್ವನಿಯಾಗಿ ಬಲಿದಾನ ಮತ್ತು ಇತರ ನಾಟಕಗಳು 39
   ● ಧನಂಜಯ ಎನ್. ಆರ್.
11. ಭಾರತದ ಸ್ವಾತಂತ್ರ್ಯದಲ್ಲಿ ಕನ್ನಡ ಮತ್ತು ಇತರ ಭಾಷೆಯ ಪತ್ರಿಕೆಗಳ ಕೊಡುಗೆ 43
   ● ಮುನಿರಾಜು ವಿ.
12. ಶಿವರಾಮಕಾರಂತರ ಕಾದಂಬರಿಗಳಲ್ಲಿ ಸ್ವಾತಂತ್ರ ಚಳುವಳಿಯ ಚಿತ್ರಣ 48
   ● ಶ್ರೀ ರಾಜಶೇಖರ ಬಿರಾದಾರ ಬೋನ್ಹಾಳ
13. ಹರಿಹರನ ರಗಳೆಗಳಲ್ಲಿ ತಲ್ಲಣಗಳು 55
   ● ಶಿವಕುಮಾರ ವೀ. ಅಂಗಡಿ


Scanned with CamScanner

# ಸ್ವಾತಂತ್ರ್ಯ ಚಳುವಳಿಗೆ ಮಹರ್ಷಿ ಅರವಿಂದರ ಕೊಡುಗೆ

● ಪ್ರೊ. ಬಿ. ಬಿ. ಡೆಂಗನವರ

ನಾವು ಇತಿಹಾಸದಲ್ಲಿ ಕಾಣುವಂತೆ ಒಬ್ಬ ವ್ಯಕ್ತಿಯಿಂದ ಒಂದು ದೇಶಕ್ಕೆ ಕೀರ್ತಿ ಬರುತ್ತದೆ. ಒಂದು ನಾಡಿಗೆ, ಒಂದು ಊರಿಗೆ ಕೀರ್ತಿ ಬರುತ್ತದೆ. ಮಹಾತ್ಮಾ ಗಾಂಧೀಜಿಯವರ ಹೆಸರು ಬಂದಾಗ ಜಗತ್ತಿನ ನಕ್ಷೆಯಲ್ಲಿ ಭಾರತದ ನೆನಪಾಗುತ್ತದೆ. ಅಬ್ರಾಹಿಂ ಲಿಂಕನ್ ಎಂದಾಗ ಅಮೇರಿಕದ ಅರಿವಾಗುತ್ತದೆ. "ಹಿಟ್ಲರ್" ಎಂದ ತಕ್ಷಣ ಜರ್ಮನಿ ಚಿತ್ರ ಕಣ್ಣು ಮುಂದೆ ಬಂದು ನಿಲ್ಲುತ್ತದೆ. ಅದರಂತೆ ಝಾಂನ್ಸಿ ಎಂದಾಗ ವೀರವನಿತೆ ಲಕ್ಷ್ಮೀಬಾಯಿ ನೆನಪಾಗುತ್ತಾಳೆ. ಹಾಗೇ ಸಂಗೊಳ್ಳಿ ರಾಯಣ್ಣಿ, ಕಿತ್ತೂರ ಚೆನ್ನಮ್ಮ ಇವರ ಯಶೋಗಾಥೆ ನಮ್ಮ ಸ್ಮೃತಿಪಟಲದ ಮುಂದೆ ಬಂದು ನಿಲ್ಲುತ್ತದೆ. ಹಾಗೇಯೇ ಪಾಂಡಿಚೇರಿಯನ್ನು ಜ್ಞಾಪಿಸಿಕೊಂಡಾಗ ಮಹರ್ಷಿ ಅರವಿಂದರ ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿ ದೇಶಕ್ಕಾಗಿ ಅವರು ಅವಿರತವಾಗಿ ಹೋರಾಟದ ಸಂದರ್ಭ ಭಾರತೀಯರಲ್ಲಿ ಮೈ ನವಿರೇಳಿಸುವಂತಹ ರೋಚಕ ಕಥೆಯಾಗಿದೆ. ಭಾರತವು ಬ್ರಿಟಿಷರ ಕೈವಶವಾದ ಹಂತಗಳನ್ನು ಸ್ಥೂಲವಾಗಿ ನೋಡಲಾಗಿ 1757ರ ಪ್ಲಾಸಿ ಕದನದ ನಂತರ ಬಂಗಾಳ, ಬಿಹಾರ, ಓರಿಸ್ಸಾ, ಆಸ್ಸಾಂಗಳನ್ನೊಳಗೊಂಡ ಬಂಗಾಳ ಪ್ರಾಂತ್ಯದ ಪತನವಾದದ್ದು 1765ರಲ್ಲಿ ಮೊಘಲ ಸಾಮ್ರಾಟನ್ನು ಬಂಗಾಳದ ದಿವಾನಿ ಹಕ್ಕನ್ನು ಬ್ರಿಟಿಷ ಕಂಪನಿಗೆ ಕೊಟ್ಟಾಗ ಭಾರತದ ಕೇಂದ್ರಪ್ರದೇಶದ ಪರಮಾಧಿಕಾರವು ವಾಸ್ತವವಾಗಿ ಕಂಪನಿಗೆ ಸಂದಂತಾಯಿತು ಎಂದು ಡಾ. ಕೆ. ಎಂ. ಪಣಿಕರ್ ಹೇಳುತ್ತಾರೆ.

ಹೀಗೆ ಬ್ರಿಟಿಷರು ಭಾರತದಲ್ಲಿ ಬ್ರಿಟಿಷರು ಆಳುತ್ತಿದ್ದ ಅನೇಕ ಹಿರಿ-ಕಿರಿ ರಾಜ್ಯಗಳನ್ನು ನಾಮಶೇಷ ಮಾಡಿ ಇಲ್ಲವೇ ಆ ರಾಜರುಗಳನ್ನು ತಮ್ಮ ಮಾಂಡಳಿಕರನ್ನಾಗಿ ಮಾಡಿಕೊಂಡು ಭಾರತದ ಮೇಲೆ ಪ್ರಭುತ್ವ ಸ್ಥಾಪಿಸಿದರೂ ಕೂಡಾ ಭಾರತದಲ್ಲಿ ಬ್ರಿಟಿಷ ಸತ್ತೆಯ ವಿರುದ್ಧ ಸತತವಾಗಿ ಸಶಸ್ತ್ರ ಬಂಡಾಯಗಳು ನಡದೇ ಇದ್ದವು 1857ರ ಸಿಪಾಯಿ ದಂಗೆ ಭಾರಿ ಪ್ರಮಾಣದ ಬಂಡಾಯವು ಇತಿಹಾಸದಲ್ಲಿ ಖ್ಯಾತಿ ಹೊಂದಿದೆ ರಾಜಕೀಯ ಹಾಗೂ ಆರ್ಥಿಕ ಬದಲಾವಣೆಗಳ ಜೊತೆ ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳೂ ಬ್ರಿಟಿಷರ ಬಗ್ಗೆ ಅತೃಪ್ತಿಯನ್ನು ಹೆಚ್ಚಿಸಲು ಕಾರಣವಾದವು ಇಂಗ್ಲೀಷ ಅಧಿಕಾರಿಗಳ ದರ್ಪ ಅಹಂಕಾರಿಗಳಿಗೆ ಮಿತಿ

Scanned with CamScanner

ಇರಲಿಲ್ಲ ಪ್ರತಿಯೊಬ್ಬ ಭಾರತೀಯನೂ ತನಗೆ ಎದುರಾದ ಬಿಳಿಯ ಅಧಿಕಾರಿಗಳಿಗೆ ಸಲಾಮ ಹೊಡೆಯಬೇಕು ಇಲ್ಲವಾದಲ್ಲಿ ಆತ ಶಿಕ್ಷೆ ಅಪಮಾನಗಳಿಗೆ ಒಳಗಾಗಿ ಹಿಂಸೆಯನ್ನು ಅನುಭವಿಸುತ್ತಿದ್ದರು. ಈ ಎಲ್ಲ ಕಾರಣಗಳಿಗಾಗಿ ಬ್ರಿಟಿಷರ ವಿರುದ್ಧ ಬಂಡಾಯವೇಳಲು ವಿವಿಧ ವರ್ಗದ ಜನ ಸೇರಲು ಮೇಲಿನ ಅನೇಕ ಕಾರಣಗಳು ಪ್ರೇರಕವಾದವು. ರಾಜಾರಾಮ ಮೋಹನ ರಾಯ್ ಆಧುನಿಕ ಭಾರತದ ತಳಹದಿಯನ್ನು ಹಾಕಿದ ಮಹಾನುಭಾವರು, ಮಹಾಪುರುಷರು ಅವರು ಧಾರ್ಮಿಕ, ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಮಾಡಿದ ಸುಧಾರಣೆಗಳಿಂದಲೇ ಭಾರತ ದೇಶದಲ್ಲಿ ಜನ ಜಾಗ್ರತೆ ಉಂಟಾಯಿತು.

ಭಾರತ ಸ್ವಾತಂತ್ರ್ಯದ ಆಂದೋಲನದಲ್ಲಿ ಶ್ರೀ. ಅರವಿಂದರು ಪ್ರಮುಖ ಪಾತ್ರವನ್ನು ವಹಿಸಿ ಎರಡು-ಮೂರು ವರುಷ ಶ್ರಮ ಪಡುವಷ್ಟರಲ್ಲಿ ಅವರನ್ನು ಅವರ ಕ್ರಾಂತಿಕಾರಕ ಲೇಖನಗಳ ಸಲುವಾಗಿ ಬಂಧಿಸಿ, ಅಲೀಪುರ ಸೆರೆಮನೆಯಲ್ಲಿ ಇರಿಸಿದರು. ಅಲ್ಲಿ ಅವರು ಇಡೀ ವರುಷ ಕಚ್ಚಾ ಖೈದಿಯಾಗಿ ಎಲ್ಲ ಕಷ್ಟಗಳನ್ನು ಅನುಭವಿಸಿದರು. ಅವರು ಸೆರೆಯಾಳಾಗುವ ಮೊದಲು ತಮ್ಮ ಹೃದಯಸ್ಥ ದೇವನನ್ನು ಕಾಣುವ ಸಲುವಾಗಿ ಪ್ರಯತ್ನ ನಡೆಸಿದರು. ಆದರೆ ಬಿಡುವಿಲ್ಲದ ಕೆಲಸಗಳಲ್ಲಿ ಅವರಿಗೆ ಯಶಸ್ಸು ಉಂಟಾಗಿರಲಿಲ್ಲ "ಈಗ ಪರಮದಯಾಳುವಾದ ಈಶ್ವರನೇ ನನ್ನ ಹಾದಿಯನ್ನು ಹಗುರುಗೊಳಿಸಿ" ಈ ಯೋಗಾಶ್ರಮಕ್ಕೆ ಅಂದರೆ ಸೆರೆಮನೆಗೆ ಕಳಿಸಿದನು ಎಂದು ಅವರು ಭಾವಿಸುವಂತಾಯಿತು. ಅದರಂತೆ ಅವರಿಗೆ ಆ ಕಂಗಾಲ ಕೋಣೆಯಲ್ಲಿ ದೇವ ದರ್ಶನವಾಯಿತು. ಸರಕಾರವು ಅವರನ್ನು ಸಿಟ್ಟಿನಿಂದ ಹಿಡಿದು ಕಾರ್ಯಗೃಹದಲ್ಲಿ ಇರಿಸಿದರೂ ಅದರ ಪರಿಣಾಮ ಮಾತ್ರ ಒಳ್ಳೆಯದೇ ಆಯಿತು. ಹನ್ನೇರಡು ತಿಂಗಳು ಸೆರೆಮನೆಯಲ್ಲಿದ್ದು ನಂತರ ದೋಷಮುಕ್ತರಾಗಿ ಹೊರಬಿದ್ದು ಸೆರೆಮನೆಯಲ್ಲಿ ಅವರ ದೇವರ ಅನುಗ್ರಹವಾಗಿ ಅವರ ರಾಜಕೀಯ ಆಂದೋಲನದಲ್ಲಿ ಭಾಗವಹಿಸುವುದನ್ನು ಬಿಟ್ಟುಕೊಟ್ಟು ಬ್ರಿಟಿಷ ಭಾರತದಿಂದ ಹೊರಬಿದ್ದು ಕಲಕತ್ತೆಯಿಂದ ಮೊದಲು ಚಂದ್ರನಗರಕ್ಕೂ ಆ ಮೇಲೆ ಪಾಂಡಿಚೇರಿಗೂ ಪ್ರಯಾಣ ಬೆಳೆಸಿದರು. ಬಂಗಾಲ ಉಪ ಸಾಗರದ ಕರಾವಳಿಯಲ್ಲಿ ಮದ್ರಾಸದಿಂದ ದಕ್ಷಿಣಕ್ಕೆ ಪಾಂಡಿಚೇರಿಯು ಸುಮಾರು ನೂರು ಮೈಲಿನಷ್ಟು ದೂರವಿದೆ. ಅದು ಆಗ ಫ್ರೆಂಚ್ ವಸಾಹತ್ತಿನ ಮುಖ್ಯ ನಗರವಾಗಿತ್ತು. ಬ್ರಿಟಿಷ ಸರಕಾರದ ದೃಷ್ಠಿಯಲ್ಲಿ ಅವರನ್ನು ಬಂಧಿಸುವ ಅತಿಭಯಾನಕ ವ್ಯಕ್ತಿ ಈತ ಎಂದು ತಮ್ಮೆಲ್ಲ ತೊಂದರೆಗಳಿಗೆ ಮೂಲ ಕಾರಣವೆಂದು ಭಾವಿಸಿದ್ದರು. ಪಾಂಡಿಚೇರಿಗೆ ಹೋಗುವಾಗ ಶ್ರೀ ಅರವಿಂದರ ಕೈಯಲ್ಲಿ 2ನೇ ತರಗತಿಯ ಒಂದು ತಿಕೇಟು ಹಾಗೂ ಮೂವತ್ತು ಮೂರು ರೂಪಾಯಿ ಮಾತ್ರ ಇದ್ದುವಂತೆ ಇಬ್ಬರೇ ಮೂವರೇ ಸಂಗಡಿಗರು ಅವರೆಲ್ಲರೂ ಒಂದಿಲ್ಲೊಂದು ಸುಳ್ಳು ಹೆಸರು ಹೇಳಿಯೇ ಪಾಂಡಿಚೇರಿಯನ್ನು ಪ್ರವೇಶಿಸಿದರು.

Scanned with CamScanner

ಜಿತಿಂದ್ರನಾಥ ಎಂದು ಕರೆದುಕೊಳ್ಳುತ್ತಾ ಶ್ರೀ ಅರವಿಂದರು ಮಣಿಂದ್ರನಾಥರಾಯ್ ಹೆಸರಿನಲ್ಲಿ ನಳಿನಕಾಂತಗುಪ್ತರು ಗುಪ್ತ ನಾಮದಿಂದ ಪಾಂಡಿಚೇರಿಯನ್ನು ಪ್ರವೇಶಿಸಿದರು. ಮಣಿಂದ್ರನಾಥರಾಯ್ ಹೆಸರಿನಲ್ಲಿ ಶ್ರೀ ಅರವಿಂದರು ಪಾಂಡಿಚೇರಿಗೆ ಹೋಗಿ ಆಶ್ರಯ ಪಡೆದರೆಂದು ಹೇಳಲಾಗುತ್ತಿದೆ. ಆದರೆ ನಿಜವಾಗಿ ಅವರೇ ಪಾಂಡಿಚೇರಿಗೆ ಆಶ್ರಯವಿತ್ತಿದ್ದರು. ಬ್ರಿಟಿಷರ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಲು ಫ್ರೆಂಚ್ ರಾಜ್ಯಕ್ಕೆ ಹೋದರೆಂಬ ಸುದ್ದಿ ವಾಡಿಕೆಯಲ್ಲಿದೆ. ಆದರೆ ವಾಸ್ತವವಾಗಿ ಅವರಿಗೆ ತಮ್ಮದೇ ಆದ ಕಾರ್ಯಕ್ಕೆ ಯಾವ ಅಡೆತಡೆಗಳೂ ಇಲ್ಲದ ಪ್ರಶಾಂತಸ್ಥಾನವೊಂದು ಬೇಕಾಗಿತ್ತು. ಅಂಥ ಪ್ರಶಸ್ತವಾದ ಪ್ರದೇಶ ಪಾಂಡಿಚೇರಿಯೇ ಆಗಿತ್ತು. ಶ್ರೀ ಅರವಿಂದಾಶ್ರಮವನ್ನು ಯಾರು ರಚಿಸಲಿಲ್ಲ ಅದು ತಾನಾಗಿಯೇ ರೂಪಗೊಂಡಿತು. ಒಂದು ಬಗೆಯಲ್ಲಿ ಅದು ಶ್ರೀ ಅರವಿಂದರು ಪಾಂಡಿಚೇರಿಗೆ ಬಂದ ದಿನ (1910ನೇ ಏಪ್ರೀಲ್ 4) ದಿಂದಲೇ ಅದು ರೂಪಗೊಳ್ಳತೊಡಗಿತು. ಆಶ್ರಮದ ಇತಿಹಾಸವೆಂದರೆ ಶ್ರೀ ಮಾತೆಯವರು ಜೀವನಕಾರ್ಯ ಉಜ್ವಲ ಚರಿತ್ರವೇ ಆಗಿದೆಯೆಂದು ಹೇಳಬಹುದಾಗಿದೆ. ಶ್ರೀ ಅರವಿಂದರಂತೂ "ಆಶ್ರಮವು ಮಾತೆಯನಿರ್ಮಿತೆಯೇ ಆಗಿದೇ" ಎಂದಿದ್ದಾರೆ. ನಿಜವಾಗಿ ಶ್ರೀ ಅರವಿಂದರು ಕೃತುಶಕ್ತಿಯಾದರೆ ಶ್ರೀ ಮಾತೆ ಆ ಶಕ್ತಿಯ ಅಂತರ್ಬಾಹ್ಯ ಜ್ಯೋತಿ ಸ್ವರೂಪರು ಶ್ರೀ ತಾಯಿಯವರೆಂದರೆ ಪೌರ್ವಾತ್ಯಯೋಗ ಅನುಭವ ತತ್ತ್ವಜ್ಞಾನಗಳ ಮತ್ತು ಪಾಶ್ಚಿಮಾತ್ಯ ಓರಣ-ಶಿಸ್ತುಗಳ ಸಮರಸಕ್ಕಿಳಿದ ಪಾಕ ಅದೇ ಆಶ್ರಮ ಜೀವನದ ಪರಿಪಾಕ ಹಲವು ಮತ ಪಂಥದವರು ಹಲವು ಭಾಷೆಯವರು ಹಲವು ಸ್ವಾಭಾವದವರು ಒಟ್ಟೊಟ್ಟಗೆ ಜೀವಿಸಲು ಸಾಧ್ಯ ವಿದೆಯೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಭಾವೈಕ್ಯವನ್ನು ನಡೆದು ತೋರಿಸಿದ್ದಾರೆ ಅದು ಜಾತ್ಯತೀತತೆ ಭಾಷಾತೀತತೆಯಾಗಿತ್ತು. ಅನುಭಾವಿ ತತ್ವಜ್ಞಾನಿ, ಪ್ರವಾದಿ ವಿದ್ವಾಂಸ, ಕ್ರಾಂತಿಕಾರ, ಜನನಾಯಕ; ಈ ಎಲ್ಲ ರೀತಿಗಳಲ್ಲಿ ಶ್ರೀ ಅರವಿಂದರು ಭಾರತವನ್ನು ಸೇವಿಸಿದರು.

ಶ್ರೀ ಅರವಿಂದರು ದೇಶದ ಸ್ವಾತಂತ್ರ್ಯ ಸಂಪಾದನೆಯ ವಿಚಾರವಾಗಿ ಬರೋಡಾದಲ್ಲಿದ್ದಾಗ ಹೀಗೆ ಗುಪ್ತನಾಮಾಂಕಿತ ದಿಂದಲೇ ಲೇಖನಗಳನ್ನು ಬರೆದು ಜನರ ವಿಚಾರ ಶಕ್ತಿಯನ್ನು ಕೆರಳಿಸಿ ದೇಶದ ಬಿಡುಗಡೆಯ ಬಗ್ಗೆ ಜನರಿಗೆ ಹುಚ್ಚು ಹಿಡಿಸಿದರು. ಇದೇನೂ ಸಣ್ಣ ಕೆಲಸವಲ್ಲ ಶ್ರೀ ಅರವಿಂದರು ಮತ್ತು ಲೋಕ ಮಾನ್ಯರು ಸ್ವರಾಜ್ಯದ ಮಂತ್ರದೀಕ್ಷೆಯನ್ನು ನಾಡಿಗೆ ಕೊಟ್ಟ ರಾಷ್ಟ್ರಗುರುಳೆನ್ನಬಹುದು. ಆ ಸ್ವರಾಜ್ಯ ಪಡೆಯುವುದು ಹೇಗೆ? ಸ್ವದೇಶಿ ನೀತಿಯಿಂದ ಸಾಧ್ಯವೆಂದು ಮನಗಂಡು; ನಮ್ಮ ದೇಶಕ್ಕೆ ಅನುಗುಣವಾದ, ಹಿತಕಾರಿಯಾದ ಶಿಕ್ಷಣವನ್ನು ನಮ್ಮ ಜನರಿಗೆ ಕೊಡಬೇಕು ನಮ್ಮ ಆರ್ಥಿಕಾಭಿವೃದ್ಧಿಯಲ್ಲಿ ನಮ್ಮ ದೇಶದ ವಸ್ತುಗಳನ್ನೆ ಅವಲಂಬಿಸಬೇಕು ನಮ್ಮ ದೇಶದ ನ್ಯಾಯ ಪದ್ಧತ್ತಿಯನ್ನೆ ಅವಲಂಬಿಸಬೇಕು ಈ

Scanned with CamScanner

ಸ್ವದೇಶ ಚಳುವಳಿಯು ಯಶಸ್ವಿಯಾಗಬೇಕಾದರೆ ಪರಕೀಯ ಎಂಬುದು ಏನೊಂದು ಇರಬಾರದು ಅಂದರೆ ವಿದೇಶಿ ಮಾಲು ವಿದೇಶಿ ಸಂಸ್ಥೆಗಳು, ವಿದೇಶ ಭಾವನೆಗಳು ಎಲ್ಲವಕ್ಕೂ ಬಹಿಷ್ಕಾರ ಹಾಕಬೇಕು. ಅದೇ ಬಾಯ್‌ಕಾಟ್ (Boycott) ನೀತಿ ಸ್ವದೇಶಿ ನೀತಿಯು ಯಶಸ್ವಿಯಾಗಬೇಕಾದರೆ, ಬಹಿಷ್ಕಾರ ನೀತಿಯು ಪರಿಪೂರ್ಣವಾಗಿ ಆಚರಣೆಯಲ್ಲಿ ತಂದು ಬರಬೇಕು ಅದೇ ಸಹಕಾರ ಚಳುವಳಿ ಅಂದರೆ ಮುಂದೆ ಗಾಂಧೀಜಿ ಆಚರಣೆಯಲ್ಲಿರುವುದ ಸ್ವರಾಜ್ಯ, ಸ್ವದೇಶಿ, ಅಸಹಕಾರ, ವಿದೇಶಿ ಬಹಿಷ್ಕಾರ ನೀತಿಯ ತಳಹದಿಯನ್ನು ಶ್ರೀ ಅರವಿಂದರೇ ಹಾಕಿದರು.

ಮೊದಲನೆಯದಾಗಿ ನಮ್ಮ ಗುರಿ ಸ್ವರಾಜ್ಯ, ಬ್ರಿಟಿಷ್ ಪಾರತಂತ್ರ್ಯ ದಿಂದ ಸಂಪೂರ್ಣ ಸ್ವತಂತ್ರರಾಗುವುದೇ ಭಾರತೀಯರ ಗುರಿಯಾಗಬೇಕು ಎಂಬುದಾಗಿ ಮೊಟ್ಟ ಮೊದಲ ಬಾರಿ ಸಂಪೂರ್ಣ ಸ್ವಾತಂತ್ರ್ಯದ ಗುರಿಯನ್ನು ದೇಶದ ಮುಂದೆ ಇಟ್ಟವರೇ ಶ್ರೀ ಅರವಿಂದರು "ಸ್ವ-ರಾಜ್ಯ" ಎಂಬ ಪದವನ್ನು ಬಳಕೆಯಲ್ಲಿ ತಂದ ಪ್ರಥಮ ನಾಯಕರೇ ಶ್ರೀ ಅರವಿಂದರು ಆ ಮಾತನ್ನು ಶ್ರೀ ಲೋಕಮಾನ್ಯ ತಿಲಕರು ಒಪ್ಪಿಕೊಂಡು "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ಪಡೆದೇ ತೀರುತ್ತೇನೆ" ಎಂಬುದಾಗಿ ಘೋಷಿಸಿದರು. ಸ್ವದೇಶಿ ಮಾರ್ಗದಿಂದಲೇ ಭರತಖಂಡದ ಸ್ವರಾಜ್ಯ ಸಂಪಾದನೆಯು ಸಾಧ್ಯ ಎಂಬುದಾಗಿ ಮೊದಲು ನಾಡಿಗೆಲ್ಲ ಸಾರಿದವರೇ ಶ್ರೀ ಅರವಿಂದರು ಸ್ವರಾಜ್ಯವೆಂದರೆ ಬ್ರಿಟಿಷರ ದಬ್ಬಾಳಿಕೆಯಿಂದ ಬಿಡುಗಡೆ ಹೊಂದುವಷ್ಟೆ ಅಲ್ಲ. ಬಿಡುಗಡೆ ಹೊಂದಿದ ದೇಶದ ಸ್ವತಂತ್ರ ಬಾಳನ್ನು ಶಕ್ತಿಯುತವನ್ನಾಗಿ ಮಾಡಲು ಇಡೀ ಭಾರತೀಯರ ಬಾಳು ಏಕಮುಖವಾಗಿ ಬೆಳೆಯುವ ಚೈತನ್ಯವನ್ನಾಗಿ ಮಾಡಲು ಪ್ರಯತ್ನಿಸುವುದೇ ಸ್ವರಾಜ್ಯ ಎಂಬುದಾಗಿಯು ಸ್ಪಷ್ಟವಾಗಿ ನಿರೂಪಿಸಿದರು.

ಹೀಗೆ ಬಹಿರಂಗವಾಗಿ ಅಂತರಂಗವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಣಿಗೊಳಿಸುತ್ತಿರುವಾಗ ಶ್ರೀ ಅರವಿಂದರು ಲೋಕ ಮಾನ್ಯ ತಿಲಕರ ನಿಕಟಪರಿಚಯವಾಗಿ ಮುಂಬಯಿ ಮತ್ತು ಪುಣೆಯಲ್ಲಿ ಅವರನ್ನು ಕಂಡು ವಿಚಾರ ವಿನುಮಯ ಮಾಡಿದರು. ಭಾರತದ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ, ಆ ಸಮಸ್ಯೆಗಳ ಪರಿಹಾರದ ಬಗ್ಗೆ ಅವರಿಬ್ಬರಲ್ಲಿ ನೂರಕ್ಕೆ ನೂರರಷ್ಟು ಏಕಾಭಿಪ್ರಾಯವಿತ್ತು. ಲೋಕಮಾನ್ಯರು ಸ್ವತಂತ್ರ ವ್ಯಕ್ತಿಯಾದುದ್ದರಿಂದ ಬಹಿರಂಗದಲ್ಲಿ ನಿಂತು ಬ್ರಿಟಿಷರೊಡನೆ ಹೋರಾಡಿದರು. ಆದರೆ ಶ್ರೀ ಅರವಿಂದರು ಸರಕಾರಿ ನೌಕರಿಯಲ್ಲಿದ್ದುದರಿಂದ ಬಹಿರಂಗಕ್ಕೆ ಬಾರದೇ ಗುಪ್ತವಾಗಿಯೇ ಲೋಕಮಾನ್ಯರ ಎಲ್ಲ ಕೆಲಸಗಳಿಗೂ ನೆರವಾಗುತ್ತಿದ್ದರು. ಇದೇ ಸಂದರ್ಭದಲ್ಲಿಯೇ ಸೋದರಿ ನಿವೇದಿತಾ ಅವರ ಪರಿಚಯವೂ ಶ್ರೀ ಅರವಿಂದರಿಗೆ ಆಯಿತು. ನಿವೇದಿತಾ ಭರತ ಖಂಡದ ಸ್ವಾತಂತ್ರ್ಯ ಸಂಪಾದನೆಯ ಬಗ್ಗೆ ಸಂಪೂರ್ಣ ಸಹಾನುಭೂತಿ ಹೊಂದಿದ್ದರು ಮಾತ್ರವಲ್ಲದೆ ಅವರೂ ದೇಶದ ಗುಪ್ತ ಚಳುವಳಿಗೆ ಕೆಲಮಟ್ಟಿಗೆ ನೆರವಾದರು. ಒಮ್ಮೆ ಬರೋಡಕ್ಕೆ

Scanned with CamScanner

ಬಂದಿದ್ದಾಗ ಶ್ರೀ ಅರವಿಂದರೆ ಅವರನ್ನು ರೇಲ್ವೈ ನಿಲ್ದಾಣದಲ್ಲಿ ಬೇಟ್ಟಿ ಮಾಡಿ ವಸತಿ ಗೃಹದಲ್ಲಿ ಸೇರಿ ಇಬ್ಬರೂ ವಿಚಾರ ವಿನಿಮಯ ಮಾಡಿಕೊಂಡರೆಂದು ಚರಿತ್ರೆಕಾರರು ಬರೆದಿದ್ದಾರೆ.

1905ರಲ್ಲಿ ಬಂಗಾಳ ಪ್ರಾಂತವನ್ನು ವಿಭಜನೆ ಮಾಡುವ ಶಾಸನವನ್ನು ಬ್ರಿಟಿಷ ಪಾರ್ಲಿಮೆಂಟ್ ಮಂಜೂರ ಮಾಡಿತು ಅದಿನ್ನೂ ಜಾರಿಯಲ್ಲಿ ಬಂದಿರಲಿಲ್ಲ ಆಗ ವಂಗಭಂಗ ಚಳುವಳಿ ಅಕ್ಷರಶಃ ಕಾಳ್ಗಿಚ್ಚಿನಂತೆ ಬಂಗಾಳದಲ್ಲೆಲ್ಲ ಬೃಹದಾಕಾರವಾಗಿ ಹಬ್ಬಿ ಬಿಟ್ಟಿತು ಏನೂ ಅರಿಯದ ಹಾಲುಗಲ್ಲದ ಪ್ರಾಥಮಿಕ ಶಾಲಾ ಬಾಲಕರಿಂದ ಹಿಡಿದು ಮುದುಕರವರೆಗೆ ಇಡೀ ಬಂಗಾಳದ ಜನತೆ ಈ ಶಾಸನದ ವಿರುದ್ಧ ಹೋರಾಟಕ್ಕೆ ಸಿದ್ಧವಾಗಿದ್ದರು. ಈ ಚಳುವಳಿ ಭಾರತದ ರಾಷ್ಟ್ರೀಯ ಹೋರಾಟದ ಇತಿಹಾಸದಲ್ಲಿ "ವಂದೇ ಮಾತರಂ" ಚಳುವಳಿಯೆಂದು ಜಗದ್ವಿಖ್ಯಾತವಾಯಿತು 19ನೇ ಶತಮಾನದ ಕೊನೆಯ ಹತ್ತಿಪ್ಪತ್ತು ವರ್ಷಗಳಲ್ಲಿ ಗುಪ್ತವಾಗಿ ಹೊಗೆಯಾಡುತ್ತಿದ್ದ ಅತೃಪ್ತಿ "ವಂದೇ ಮಾತರಂ" ಚಳುವಳಿಯ ನೆಪಸಿಕ್ಕ ಕೂಡಲೇ ಪ್ರಚಂಡ ಜ್ವಾಲಾಮುಖಿಯಂತೆ ಸಿಡಿದು ಉರಿಯ ತೊಡಗಿತು. ಸುರೇಂದ್ರನಾಥ ಬ್ಯಾನರ್ಜಿ ಅವರಂಥ ರಾಜನಿಷ್ಠೆಯ ಮುಖಂಡರೂ ಕೂಡಾ ಚಳುವಳಿಯಲ್ಲಿ ಮುನ್ನುಗಿದ್ದರು. ಪೋಲೀಸರು ಅವರನ್ನು ಹಿಡಿದೆಳದು ಹೊಡೆದರು. ನ್ಯಾಯಾಲಯಕ್ಕೆ ಎಳೆದೊಯ್ದರು. ಹೀಗೆ ಇಡೀ ಬಂಗಾಳದ ಹಳ್ಳಿ ಹಳ್ಳಿಯಲ್ಲೂ "ವಂದೇ ಮಾತರಂ" ಚಳುವಳಿ ಹಬ್ಬಿತು ಶ್ರೀ ಅರವಿಂದರಿಗೆ ಇದು ಸುಸಮಯ ಸುಸಂದಿಯಾಗಿ ಒದಗಿ ಬಂತು ಇದೇ ಸಂದರ್ಭದಲ್ಲಿ ರಾಜಾನುಬೋದಮಲಿಕ್ ಅವರು ಕಲ್ಕತ್ತೆಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸಿದರು. ಆ ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಯನ್ನು ಶ್ರೀ ಅರವಿಂದರು ವಹಿಸಿಕೊಳ್ಳಬೇಕೆಂದು ಪ್ರಾರ್ಥಿಸಿದರು. ಶ್ರೀ ಅರವಿಂದರಿಗೂ ಅದೇ ಬೇಕಾಗಿತ್ತು ಅದೇ ಹೊತ್ತಿಗೆ ಬಿಪಿನ್ ಚಂದ್ರಪಾಲರು "ವಂದೇ ಮಾತರಂ" ಎಂಬ ಆಂಗ್ಲ ವಾರ ಪತ್ರಿಕೆಯನ್ನು ಹೊರಡಿಸಿ ಶ್ರೀ ಅರವಿಂದರ ನೆರವನ್ನು ಕೋರಿದರು. ಅಂತೂ ಶ್ರೀ ಅರವಿಂದರ ಆಕಾಂಕ್ಷೆ ಈಡೇರುವ ಕಾಲ ಸನ್ನಿಹಿತವಾಯಿತು. ಬರೋಡಾ ರಾಜ್ಯದ ಸೇವೆಗೆ ರಾಜೀನಾಮೆ ಕೊಟ್ಟು ಶ್ರೀ ಅರವಿಂದರು ಕಲಕತ್ತೆಗೆ ಬಂದು, ಕಾಲೇಜಿನ ಪ್ರಿನ್ಸಿಪಾಲ್ ಕೆಲಸವನ್ನು ವಹಿಸಿಕೊಂಡರು ಆದರೆ ಒಳಗೆ ಮಾಡುತ್ತಿದ್ದ ಕೆಲಸ "ವಂದೇ ಮಾತರಂ" ಮತ್ತು "ಯುಗಾಂತರ" ಪತ್ರಿಕೆಗಳನ್ನು ನಡೆಸುವುದು ಚಳುವಳಿಗೆ ಗುಪ್ತವಾಗಿ ಪ್ರೋತ್ಸಾಹ ಕೊಡುವುದೇ ಆಗಿತ್ತು. ಶ್ರೀ ಅರವಿಂದರು ಈ ಎರಡು ಪತ್ರಿಕೆಗಳ ಮೂಲಕ ಏಟಿಗೆಏಟು ಮುಯ್ಯೆಗೆಮುಯ್ಯಿ ಎಂಬುದಾಗಿ ಬಂಗಾಳದ ಜನತೆಯನ್ನು ನಿರ್ಭಯವಾಗಿ ಎಚ್ಚರಿಸುತ್ತಿದ್ದರು. ಅರವಿಂದರ ಕ್ರಾಂತಿಕಾರಕ ಬದಲಾವಣೆಯನ್ನು ಸುಮ್ಮನೆ ಬಿಟ್ಟರೆ ಆಂದೋಲನ ಇನ್ನೂ ಹೆಚ್ಚಾಗುವುದೆಂದು ಅದನ್ನು ಬಗ್ಗುಬಡೆಯಲು ಪತ್ರಿಕೆಯ

Scanned with CamScanner

ಲೇಖನಗಳು ರಾಜದ್ರೋಹ ಪ್ರಚೋದಕವಾದುದೆಂದು ಶ್ರೀ ಅರವಿಂದರನ್ನು ಹಾಗೂ ಬಿಪಿನ್ ಚಂದ್ರಪಾಲ್‌ರನ್ನು ವಿಚಾರಣೆಗೆ ಗುರಿಪಡಿಸಿದರು ಹೇಗಾದರೂ ಮಾಡಿ ಇವರೀರ್ವರನ್ನು ಜೈಲಿಗೆ ಅಟ್ಟಲು ಹೊಂಚು ಹಾಕಿದ್ದರು. ಆ ಸೆರೆಮನೆಯವಾಸ ಶ್ರೀ ಅರವಿಂದರ ಜೀವನದಲ್ಲಿ ಒಂದು ನೂತನ ಅಧ್ಯಾಯವನ್ನೆ ತೆರೆಯಿತು. ಒಂದು ವರ್ಷದ ಸೆರೆಮನೆ ವಾಸದಿಂದ ನಿರ್ದೋಷಿಗಳೆಂದು ಬಿಡುಗಡೆ ಹೊಂದಿದಾಗ ಜೀವನದಲ್ಲಿ ಏನೋ ಒಂದು ಬದಲಾವಣೆಯ ಗಾಳಿ ಬೀಸಿ ಹೊಸ ಮನ್ವಂತರಕ್ಕೆ ನಾಂದಿಯಾಯಿತು ಅಪಾರವಾದ ಯೋಗಾಭ್ಯಾಸದಲ್ಲಿ ತೊಡಗಿ ವಿಶೇಷ ಸಿದ್ಧಿಗಳನ್ನು ಪಡೆದು ಅಲೀಪುರ ಜೈಲಿನಿಂದ ಬಿಡುಗಡೆ ಹೊಂದಿದ ಮೇಲೆ ಹೊರಗೆ ಬಂದು ಮುಂಬೈ, ಬರೋಡಾ, ಪುಣೆ, ಕಲ್ಕತ್ತಾ, ಹೌರಾ, ಉತ್ತರಪಾಡಾ ಮುಂತಾದ ಕಡೆ ಭಾಷಣ ಮಾಡಿದರು. ಶ್ರೀ. ಅರವಿಂದರು.

ಶ್ರೀ ಅರವಿಂದರು ನಮ್ಮ ರಾಷ್ಟ್ರೀಯ ಚಳುವಳಿಗೆ ಒಂದು ಧಾರ್ಮಿಕ ಒಲವನ್ನು, ನಿಲುವನ್ನು ಕೊಟ್ಟು ದೇಶ ಎಂದರೆ ದೇವಿ, ರಾಷ್ಟ್ರೀಯತೆ ಎಂದರೆ ಧರ್ಮ, ಸ್ವಾತಂತ್ರ್ಯಎಂದರೆ ಮುಕ್ತಿ ಎಂಬುದಾಗಿ ಸಾರಿದ ಪಾಂಚ್ಯಜನ್ಯದ ನೀನಾದವನ್ನು ಕೇಳುತ್ತೇವೆ. 1909–10ರ ವರೆಗೆ ಶ್ರೀ ಅರವಿಂದರಿಗೆ ಭಾರತೀಯ ಸ್ವಾತಂತ್ರ್ಯ ಬಂದೇ ಬರುತ್ತದೆ. ಎಂಬುದು ದಿಟವಾಗಿ ಹೋಗಿತ್ತು ಭಾರತೀಯ ಸಂಸ್ಕೃತಿಗೆ ಅಪಾರ್ಥ ಕಲ್ಪಿಸುವ ಬುದ್ದಿ ಸಹಜವಾಗಿಯೆ ಪಾಶ್ಚಿಮಾತ್ಯರಲ್ಲಿದೆ ಏಕೆಂದರೆ ಅವರು ಸದ್ಯಕ್ಕೆ ಎಲ್ಲ ದೃಷ್ಟಿಯಿಂದಲೂ ಬಲಿಷ್ಟರು, ಬಲಿಷ್ಟರಿಗೆ ತಲೆಬಾಗೂವ ಜನ ಎಲ್ಲ ಕಡೆಗೂ ಇರುತ್ತಾರೆ. ನಮ್ಮ ದೇಶದಲ್ಲಿಯೂ ಅಂತಹ ಜನರಿದ್ದಾರೆ. ಜಗತ್ತಿನ ಓರ್ವಮಹೋನ್ನತ ಕವಿಯ ಸ್ಥಾನದ ಶ್ರೀ ಅರವಿಂದರು ಒಬ್ಬ ಮಹಾನ್ ಕವಿದಾರ್ಶನಿಕರಾಗಿದ್ದಾರೆ. ಶ್ರೀ ಅರವಿಂದರು ಮತ್ತು ಲೋಕಮಾನ್ಯರು ಸ್ವರಾಜ್ಯ ದೀಕ್ಷೆಯನ್ನು ನಾಡಿಗೆಕೊಟ್ಟ ರಾಷ್ಟ್ರ ಗುರುಗಳೆನ್ನಬಹುದು. ಗುರು ಕೊಟ್ಟ ಮಂತ್ರವನ್ನು ಜಪಿಸುತ್ತಾ ಲಕ್ಷಾಂತರ ಜನ ನಾಡಿಗಾಗಿ ರಕ್ತವನ್ನು, ಪ್ರಾಣವನ್ನು ಧಾರೆಯೆರೆದ ಮಹಾಯುದ್ಧದ ಯಶೋಗಾಥೆಯನ್ನು ನೆನಪಿಸಿಕೊಂಡರೆ ಮೈ ನವಿರೆಳುತ್ತದೆ.

ನೂತನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತಿಕೋಟಾ.
ಮೋ:– 9902495695

Scanned with CamScanner

**ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ**
**ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ**
**ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯ**
**ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯ**
**ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡ ನೋಡಯ್ಯ**

ಎಂಬ ವಿಶ್ವಗುರು ಬಸವಣ್ಣನವರ ನುಡಿಯಂತೆ ಜ್ಞಾನದ ಬಲದಿಂದ ಅಜ್ಞಾನವನ್ನು ಬೇರು ಸಮೇತ ಕಿತ್ತು ಬಾಳಿನಲ್ಲಿ ಜ್ಯೋತಿ ಮೂಡಿಸಲು ಶಿಕ್ಷಣ ದಾಸೋಹಕ್ಕೆ ಅಣಿಯಾಗಿ ನಿಂತ ಪ್ರಪ್ರಥಮ ಸಂಸ್ಥೆ ಕೆ.ಎಲ್.ಇ ಸಂಸ್ಥೆ. ಕರ್ನಾಟಕದ ಶಿಕ್ಷಣ ರಂಗದ ಜೀವನಾಡಿಯಾಗಿ ಸ್ಥಾಪಿತಗೊಂಡ ಈ ಸಂಸ್ಥೆಯ ಸ್ಥಾಪನೆಯ ಕಥೆಯು ರೋಮಾಂಚನ ಕಾರಿಯಾಗಿದೆ. ಒಂದು ಜನಾಂಗದ ಸೇವಾ ಭಾವ, ಸಾಹಸ ಪ್ರವೃತ್ತಿ, ತ್ಯಾಗಗಳ ಬೆವರಿನ ಕಥೆ, ಋಷಿಸದೃಶ್ಯ ಜೀವನ ನಡೆಸಿದ ಸಪ್ತ ಋಷಿಗಳ ಯಶೋಗಾಥೆಯ ಪ್ರತೀಕವೇ ಈ ಶಿಕ್ಷಣ ಸಂಸ್ಥೆ. ಇಂದು ವಿಶ್ವದಾದ್ಯಂತ ಹೆಮ್ಮರವಾಗಿ ಬೆಳೆದು ಶಿಕ್ಷಣ ಪ್ರಸಾರ ಮಾಡುತ್ತಿದೆ. ವಿಶ್ವದ ಮೂಲೆ ಮೂಲೆಗಳಲ್ಲಿಯೂ ಕೆ.ಎಲ್.ಇ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಮೆರೆಯುತ್ತಿದ್ದಾರೆ. ಇಂಥ ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್.ಕೆ ವಿಜ್ಞಾನ ಸಂಸ್ಥೆ ಹುಬ್ಬಳ್ಳಿಯಲ್ಲಿ ಸೆಪ್ಟೆಂಬರ್ 7 ಮತ್ತು 8 ರಂದು 2 ದಿನಗಳ **"ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯತೆ, ಪತ್ರಿಕೋದ್ಯಮ ಹಾಗೂ ಸಾಹಿತ್ಯದ ಪಾತ್ರ"** ಕುರಿತು ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿದ್ದು, ಈ ವಿಚಾರ ಸಂಕಿರಣದಲ್ಲಿ ವಿಭಿನ್ನ ಚರ್ಚೆಗಳ, ಪರಿಶೀಲನೆಗಳ ಅಭ್ಯಾಸ ಪೂರ್ಣ ಸಂಪ್ರಬಂಧಗಳನ್ನು ಒಳಗೊಂಡ ಕನ್ನಡ, ಹಿಂದಿ, ಇಂಗ್ಲೀಷ್, ಮರಾಠಿ ಮತ್ತು ಉರ್ದು ಭಾಷೆಗಳಲ್ಲಿ ಕೃತಿಗಳು ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಇಂತಹ ಕಾರ್ಯದಲ್ಲಿ ಪಾಲ್ಗೊಂಡಿರುವ ಸಂಯೋಜಕರಿಗೂ, ಸಂಪಾದಕರಿಗೂ ಮತ್ತು ಪ್ರಾಧ್ಯಾಪಕರಿಗೂ ಅಭಿನಂದನೆಗಳು.

**ಡಾ. ಪ್ರಭಾಕರ ಕೋರೆ**
ಮಾನ್ಯ ಲೋಕಸಭಾ ಸದಸ್ಯರು,
ಕಾರ್ಯಾಧ್ಯಕ್ಷರು,
ಕೆ.ಎಲ್.ಇ ಸಂಸ್ಥೆ, ಬೆಳಗಾವಿ

978-93-83813-43-8
ISBN : 978-93-83813-43-8
ಸೌಮ್ಯ ಪ್ರಕಾಶನ, ವಿಜಯಪುರ

